ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ ಬರುವುದಕ್ಕೆ ಮುಂಚೆ ಬಾಕಿ ಇದ್ದ ಲೋಕೋಪಯೋಗಿ ಕಾಮಗಾರಿಗಳು.

೪೭೧. ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಕಾಮಗಾರಿಗಳು ಬಾಕಿ ಇದ್ದವು? ಅವುಗಳಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ?

ಆ) ೧೯೬೬ ರಿಂದ ೧೯೮೮ರ ತನಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂ ರಸ್ತೆ ದುರಸ್ತಿಗಾಗಿ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಮಾನ್ಯ ಲೋಕೋಪಯೋಗಿ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ಲೋಕೋಪಯೋಗಿ ಇಲಾಖೆಯಲ್ಲಿ ೧೩೦ ಕಾಮಗಾರಿಗಳು ಬಾಕಿ ಇದ್ದವು. ಅವುಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ೧೨ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯಿಂದ ೧೯೮೬–೮೭ ಮತ್ತು ೧೯೮೭–೮೮ರ ಸಾಲಿನಲ್ಲಿ ಒಟ್ಟು ೨೪೮.೨೨ ಲಕ್ಷ ರೂ.ಗಳನ್ನು ರಸ್ತೆಗಳ ದುರಸ್ತಿಗಾಗಿ ಖರ್ಚು ಮಾಡಲಾಗಿದೆ.

ಆನಗವಾಡಿ ಗ್ರಾಮದ ಹತ್ತಿರ ಘಟಪ್ರಭ ನದಿಗೆ ಸೇತುವೆ ನಿರ್ಮಾಣ.

೪೯೭. ಶ್ರೀ ಬಾಬುರೆಡ್ಡಿ ತುಂಗಳ್, (ಬೀಳಗಿ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಸೋಲ್ಲಾಪುರ ಹೆದ್ದಾರಿಯಲ್ಲಿ ಬೀಳಗಿ ತಾಲ್ಲೂಕಿನ ಆನಗವಾಡಿ ಗ್ರಾಮದ ಬಳಿ ಘಟಪ್ರಭಾ ನದಿಗೆ ಎಷ್ಟನೆ ಸೇತುವೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ಮಾಡಿದ್ದು ಯಾವಾಗ.

ಆ) ಈ ಸೇತುವೆಯ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಿ ದೊರಕಿದೆಯೇ? ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು?

ಇ) ಸೇತುವೆ ನಿರ್ಮಾಣ ಕಾರ್ಯದ ವಿಳಂಬಕ್ಕೆ ಕಾರಣಗಳೇನು?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು).—

ಅ) ಏನ್.ಎಂ.ಕೆ ೧೬–೧೦–೧೯೮೬ ರಂದು ಸೇತುವೆಗೆ ಶಂಕು ಸ್ಥಾಪನೆ ಮಾಡಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೭೮ ಡಬ್ಲ್ಯೂಡಿ ೮೫ ದಿನಾಂಕ ೫–೯–೧೯೮೪ರಲ್ಲಿ ೨೪೦ ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಇ) ವಿಶ್ವಬ್ಯಾಂಕ್ ನೆರವಿನಿಂದ ತೆಗೆದುಕೊಳ್ಳಲು ಉದ್ದೇಶಿಸಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಅಂದಾಜಿನಲ್ಲಿ ಸದರಿ ಕೆಲಸವನ್ನು ಸೇರಿಸಲಾಗಿದೆ. ಇದಕ್ಕೆ ಮಂಜೂರಾತಿ ದೊರಕದೆ ಹಾಗೂ ಹಣ ಬಿಡುಗಡೆ ಮಾಡದೆ ಇರುವುದರಿಂದ ಈ ಕೆಲಸವನ್ನು ತೆಗೆದುಕೊಳ್ಳಲು ವಿಳಂಬವಾಗಿದೆ.

ರೋಣ ಮತ್ತು ಯಲಬುರ್ಗಾ ತಾಲ್ಲೂಕುಗಳ ಖೋಟಾ ಸ್ವತಂತ್ರ ಯೋಧರಿಗೆ ಮಾಶಾಸನ ನಿಲ್ಲಿಸಲು ಒತ್ತಾಯ.

೪೮೮. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಜಕಾರ ವಿರೋಧಿ ಚಳುವಳಿಯ ಕಾಲದಲ್ಲಿ ಹೋರಾಡಿದವರಿಗೆ ಸ್ವಾತಂತ್ರ್ಯ ಯೋಧರಂತೆಯೇ ಸರ್ಕಾರ ಮಾಶಾಸನ ಕೊಡಬೇಕೆಂದು ಆದೇಶ ಹೊರಡಿಸಿದ್ದು ನಿಜವೆ?

ಆ) ಈವರೆಗೆ ಈ ಆದೇಶದ ಪ್ರಕಾರ ಎಷ್ಟು ಜನರಿಗೆ ಮಾಶಾಸನ ನೀಡಲಾಗಿದೆ.